ಮುಕುಂದ ಹೆರಕಲ್ಲ, ಕಲಬುರ್ಗಿ
*ಮಾನಸಿಕ ರೋಗಿಗಳ ವೈದ್ಯರಿಗೆ ಹುಚ್ಚು ಹಿಡಿದರೆ ಏನಾಗಬಹುದು?*



'ಮಾನಸ ಸರೋವರ'ದಂತಹ ಚಿತ್ರಗಳು.

ಪಿ.ಜಿ. ರಾಘವೇಂದ್ರ, ಮೈಸೂರು
*ಮುಖ್ಯಮಂತ್ರಿಗಳ ಬದಲು ನಿಮ್ಮ ಕೆನ್ನೆಗೆ ಯಾರಾದರೂ ಮುತ್ತು ಕೊಟ್ಟಿದ್ದರೆ ಏನು ಮಾಡುತ್ತಿದ್ದಿರಿ?*
ಕರ್ಚೀಫಿನಿಂದ ಕೆನ್ನೆ ಒರೆಸಿಕೊಳ್ಳುತ್ತಿದ್ದೆ. ಪರಸ್ಪರ ಪ್ರೀತಿಯಿಂದ ಕೊಟ್ಟದ್ದು ಮುತ್ತು; ಇಲ್ಲವಾದರೆ ಅದು ಬರೀ ಎಂಜಲು.

ಆರತಿ ಘಟಿಕಾರ್, ದುಬೈ
*ಭೂಮಿ ಹೆಣ್ಣು, ಆಕಾಶ ಗಂಡಾದರೆ ಮಕ್ಕಳು?*
ಇನ್ನೂ ಇಲ್ಲ; ಗಂಡು ಹೆಣ್ಣು ಇನ್ನೂ ಸೇರೇ ಇಲ್ಲವಲ್ಲ.

ಕುಬೇರಪ್ಪ ವಿಭೂತಿ, ಹರಿಹರ
*ಪ್ರಸ್ತುತ ರಾಜಕೀಯದಲ್ಲಿ ಇರುವುದು ದೂರದೃಷ್ಟಿಯೋ ಅಥವಾ ದರಿದ್ರ ದೃಷ್ಟಿಯೋ?*
ದೂರು ದೃಷ್ಟಿ.

ಆರ್. ಮಧುಸೂದನ್, ಹಾಸನ
*ಮಹಾಭಾರತದ ಕಾಲದಲ್ಲಿ ಫೇಸ್‌ಬುಕ್ ಇದ್ದಿದ್ದರೆ ಗಾಂಧಾರಿ ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುತ್ತಿದ್ದಳೇ?*




ಕಟ್ಟಿಕೊಳ್ಳುತ್ತಿದ್ದುದಷ್ಟೇ ಅಲ್ಲ, ಗಂಡನಿಗಿಲ್ಲದ ವೈಫೈ ತನಗೂ ಬೇಡವೆಂದು ಡಿಸ್‌ಕನೆಕ್ಟ್ ಮಾಡುತ್ತಿದ್ದಳು.

ಅಜಯ್, ಬೆಂಗಳೂರು
*ನಳಪಾಕ, ಭೀಮಪಾಕವೇ ಏಕೆ? ಆಗಿನ ಕಾಲದಲ್ಲಿ ಹೆಣ್ಣುಮಕ್ಕಳು ಯಾರೂ ರುಚಿಯಾಗಿ ಅಡಿಗೆ ಮಾಡುತ್ತಿರಲಿಲ್ಲವೆ?*
ವಿಷಯ ಅದಲ್ಲ; ಪರಪತ್ನಿಯ ಅಡಿಗೆ ಹೊಗಳಿದರೆ ಮನೆಯ ಗಡಿಗೆ ಚೂರಾದೀತೆಂಬ ಮುನ್ನೆಚ್ಚರಿಕೆ.

ರಮೇಶ್, ಹನುಮನಾಳು
*ಮನುಷ್ಯ ಸತ್ತರೆ ದೆವ್ವ ಆಗುತ್ತಾನೆ ಅಂತಾರೆ. ಪ್ರಾಣಿ, ಪಕ್ಷಿಗಳು ಸತ್ತರೆ?*
ಕಬಾಬ್, ಬಿರಿಯಾನಿ, ರೋಸ್ಟ್, ಸೂಪ್.....

ಬೂಕನಕೆರೆ ವಿಜೇಂದ್ರ, ಮೈಸೂರು
*ಕುಡಿಯುವವರೇ ಹೆಚ್ಚು ಕಾಲ ಬದುಕುತ್ತಾರಲ್ಲಾ...?*
ಒಳಗೇ ಇರುವುದರಿಂದ ಪಲ್ಯೂಶನ್, ಆಕ್ಸಿಡೆಂಟ್‌ಗಳಿಗೆ ಒಳಗಾಗುವುದಿಲ್ಲವಲ್ಲ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ರಾಮನ ಬಾಣಕ್ಕೂ, ಕಾಮನ ಬಾಣಕ್ಕೂ ವ್ಯತ್ಯಾಸವೇನು ಸಾರ್?*
ರಾಮನ ಬಾಣದಿಂದ ತಲೆ ಹೋಳು; ಕಾಮನ ಬಾಣದಿಂದ ತಲೆ ಹಾಳು.

ಎಸ್. ಪದ್ಮ, ಬೆಂಗಳೂರು
*ಅಸತ್ಯವೇ ತುಂಬಿರುವ ನಾಡಲ್ಲಿ ಸತ್ಯವನ್ನು ಶೋಧಿಸುವವರು ಯಾರು?*
ವಿರೋಧ ಪಕ್ಷದವರು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ರಾಮನ ಹೆಸರಿನ ನೀವು ಈ ತನಕ ಯಾವ ಕಲ್ಲಿಗೂ ಜೀವ ಬರಿಸಿಲ್ಲ ಅಲ್ಲವೇ?*
ಬರಿಸಿದ್ದೇನೆ. ಅದೂ ಕಾಲು ತಾಗಿಸಿಯೇ. ಪೆಡಲ್ ಒತ್ತುವ ಮೂಲಕ ಹಲವಾರು ಸೈಕಲ್ಲಿಗೆ

ಸೃಜನ್ ಜೈನ್, ಹೂವಿನಹಡಗಲಿ
*ಗಿಡ ಬೆಳೆದು, ಹೂವು ಬಿಟ್ಟ ದಿನ 'ರಾಮ್' ಜನ್ಮದಿನವಂತೆ, ಹೌದಾ?*
ನಗೆಹೂವು ಮೂಡಿದ ದಿನವೆಲ್ಲ ರಾಮ್ ಜನ್ಮದಿನವೇ.

ನೀಲಗಂಗಾ ಬಿ. ನಿರಂಜಿ, ಧಾರವಾಡ
*ಶಿಕ್ಷಣಕ್ಕೆ ತಕ್ಕ ಉದ್ಯೋಗವನ್ನು ಸರ್ಕಾರಗಳು ಕೊಡಬೇಕಾದರೆ ಯಾವ ರೀತಿ ಸಾಧ್ಯ ಸರ್?*
ಬರೀದೇ ಶಿಕ್ಷಣಕ್ಕೆ ಸರ್ಕಾರಿ ಉದ್ಯೋಗವೆ? ಊಹೂಂ. ಜಾತಿ+ವಶೀಲಿ+ಲಂಚ+/ಶಿಕ್ಷಣ = ಸರ್ಕಾರಿ ಕೆಲಸ.

ಕುಮಾರ ಚಲವಾದಿ, ಹೊಳೆನರಸಿಪುರ
*ನನ್ನ ಮತ್ತು ಮಕ್ಕಳ ಹುಟ್ಟುಹಬ್ಬಕ್ಕೆ ನನ್ನಾಕೆಯೇ ಸೀರೆ, ಒಡವೆ ತೆಗೆದುಕೊಳ್ಳುತ್ತಾಳೆ. ಏಕಿರಬಹುದು?*
ಗೃಹಿಣಿ ಗೃಹವಿದ್ದಂತೆ. ಹಬ್ಬ, ಕಾರ್ಯ, ಶುಭಕಾರ್ಯ, ಯಾವುದೇ ಆಗಲಿ, ಸುಣ್ಣಬಣ್ಣ ಗೃಹಕ್ಕೇ!

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಪ್ರೀತಿ ಮಾಡುವವತನಕ ಹೆಣ್ಣು ಜೇನು ಇದ್ದಂತೆ. ಮದುವೆ ಆದ ಮೇಲೆ?*
ಗಂಡುಪ್ರಾಣಿಯ ಬೋನು.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಮುಕುತಿ ದೊರೆಯಲೆಂದು ಗುರುವಿನ ಗುಲಾಮರಾಗುವ ಶಿಷ್ಯರು ಈಗಲೂ ಇದ್ದಾರಾ?*
ಈಗ ಗುಲಾಮರಾಗಬೇಕಿಲ್ಲ, ಗುರುವಿನ ವಿದ್ಯಾವ್ಯಾಪಾರದ ಗಿರಾಕಿಗಳಾದರೆ ಸಾಕು.

ಕೆ. ವೇದಶ್ರೀ, ಬೆಂಗಳೂರು
*ಅಷ್ಟ ಲಕ್ಷ್ಮಿಯರಲ್ಲಿ ನಿಮ್ಮ ಇಷ್ಟ ಲಕ್ಷ್ಮಿ ಯಾರು ಮತ್ತು ಏಕೆ?*
ಕಪ್ಪು ಲಕ್ಷ್ಮಿ, ತೆರಿಗೆ ಇಲ್ಲದಿರುವುದು ಅದೊಂದೇ.

ಸುಂದರ್, ಬೆಂಗಳೂರು
*'ಹೇ! ರಾಮ್'ಗೂ, 'ಹಾಯ್, ರಾಂ'ಗೂ ಏನು ವ್ಯತ್ಯಾಸ?*



ಚೀರಿದಾಗ ಅದು, ಚಿಯರ್ಸ್ ಎನ್ನುವಾಗ ಇದು!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ಮದುವೆಯಾಯ್ತು, ಮಕ್ಕಳಾಯ್ತು, ಮನೆ ಕಟ್ಟಿಯಾಯ್ತು. ಇನ್ನು ಮುಂದೆ?*
'ಇಷ್ಟಾದರೂ ಇನ್ನೂ ಇಲ್ಲಿಯೇ ಇದ್ದಾನೆ ಇವನು' ಎನ್ನುತ್ತಿದ್ದಾರೆ ನಿಮ್ಮ ಮಾವ. ಜಾಗ ಖಾಲಿ ಮಾಡಬಾರದೇ...!

ವಿ. ಹಮೀದ್, ವಿಟ್ಲ
*ಮೊಬೈಲ್ ಮೂಲಕ ಒಬ್ಬಳನ್ನು ಲವ್ ಮಾಡುತ್ತಿದ್ದೇನೆ. ಮುಂದಕ್ಕೆ...?*
ನೆನಪಿರಲಿ. ಕರೆನ್ಸಿ ಕ್ಲೋಸ್ ಆದ ತಕ್ಷಣ ಕನೆಕ್ಷನ್ ಕಟ್!

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ
*ಮೂಕಮಂತ್ರಿಗಳ ಬರ ಅಧ್ಯಯನ ಪ್ರವಾಸದಲ್ಲಿ ಬೀದಿಯಲ್ಲೆಲ್ಲ ಸಖತ್ ಜಲಾಭಿಷೇಕವಂತೆ?*
ಸರಿಯೇ; ಮಂತ್ರಿಗಳು ಮರಳುಗಾಡಿಗೇ ಹೋದರೂ ಅವರ ವಿಷಯದಲ್ಲಂತೂ ಇರುವುದು ಒಂದೇ ಬರ ಅಬ್ಬರ!

■ ರಾಮ್